ಬೆಂಗಳೂರಿನ ಕೋಟೆ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ ಕುರಿತು

1722 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಬೆಂಗಳೂರಿನ ಕೋಟೆ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನಕ್ಕೆ ಸೇರಿದ ಉಂಬಳಿ ಕೊಟ್ಟ ಜಾಗವನ್ನು ಹರಾಜು ಮಾಡಲು ನ್ಯಾಯಾಲಯ ಆದೇಶ ನೀಡಿರುವುದು ನಿಜವೇ?*

2. *ನ್ಯಾಯಾಲಯ, ಇಲಾಖೆಯಿಂದ ಹಣ ಕಟ್ಟಲು ತಿಳಿಸಿದರು ಹಣ ಕಟ್ಟದಿರಲು ಕಾರಣಗಳೇನು?*

3. *ಈ ಹರಾಜಿನ ಬಗ್ಗೆ ಅಧಿಕಾರಿಗಳು ಶಾಮೀಲಾಗಿರುವುದು ನಿಜವೇ? (ವಿವರ ನೀಡುವುದು)*

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

1. ಹೌದು.

2. ಇಲಾಖೆಯಿಂದ ಹಣ ಕಟ್ಟಲು ನ್ಯಾಯಾಲಯದ ಆದೇಶವಾಗಿಲ್ಲ. ಡಿಕ್ರಿಯಂತೆ ದಾವಾ ಸ್ವತ್ತಿನಿಂದ ಮೊತ್ತವನ್ನು ಪಾವತಿಬೇಕಾಗಿರುತ್ತದೆ.

3. ಇಲ್ಲ.

ಸಿಂಧನೂರು ಕೃಷಿ ಸಮಿತಿಯ ಪ್ಲಾಟುಗಳು

1727 - ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಿಂಧನೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಒಟ್ಟು ಪ್ಲಾಟುಗಳ ಸಂಖ್ಯೆ ಎಷ್ಟು? ವ್ಯಾಪಾರಿಗಳಿಗೆ ಹಂಚಲಾಗಿರುವ ಪ್ಲಾಟುಗಳು ಎಷ್ಟು? ಕೃಷಿ ಮಾರುಕಟ್ಟೆ ಸಮಿತಿ ಸ್ವಾಧೀನದಲ್ಲಿರುವ ಪ್ಲಾಟುಗಳ ಸಂಖ್ಯೆ ಎಷ್ಟು?*

ಆ) *ಎಷ್ಟು ಪ್ಲಾಟುಗಳಲ್ಲಿ ಕಟ್ಟಡ ನಿರ್ಮಿಸಲಾಗಿದೆ, ಖಾಲಿ ಇರುವ ಪ್ಲಾಟುಗಳ ಸಂಖ್ಯೆ ಎಷ್ಟು?*

ಇ) *ಕಟ್ಟಡ ನಿರ್ಮಿಸಲಾರದ ಸರ್ಕಾರ ಮುಟ್ಟುಗೋಲು ಹಾಕಿಕೊಂಡಿರುವ ಪ್ಲಾಟುಗಳ ಸಂಖ್ಯೆ ಎಷ್ಟು? ಮುಟ್ಟುಗೋಲು ರದ್ದುಗೊಳಿಸಲಾದ ಪ್ಲಾಟುಗಳ ಸಂಖ್ಯೆ ಎಷ್ಟು?*

ಈ) *ಮುಟ್ಟುಗೋಲು ರದ್ದುಗೊಳಿಸಿರುವ ಪ್ಲಾಟುಗಳನ್ನು ಮಾರಾಟ ಮಾಡಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಉ) *ಕೃಷಿ ಮಾರುಕಟ್ಟೆ ಸಮಿತಿಯಲ್ಲಿ ಎಂಟು ವರ್ಷಗಳಿಂದ ನೀರಿನ ವ್ಯವಸ್ಥೆ ಇರಲಾರದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಊ) ಸರ್ಕಾರದ ಗಮನಕ್ಕೆ ಬಂದಿದ್ದರೆ ಎಷ್ಟು ದಿವಸಗಳಲ್ಲಿ ನೀರಿನ ವ್ಯವಸ್ಥೆ ಒದಗಿಸಲಾಗುವುದು ?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಸಿಂಧನೂರಿನ ಹಳೆ ಮಾರುಕಟ್ಟೆ ಪ್ರಾಂಗಣದಲ್ಲಿ 98 ಹಾಗೂ - ವಿಸ್ತೃತ ಪ್ರಾಂಗಣದಲ್ಲಿ 89 ನಿವೇಶನಗಳಿದ್ದು ಎಲ್ಲಾ ನಿವೇಶನಗಳನ್ನು ಹಂಚಲಾಗಿದೆ. ಸಮಿತಿಯ ಸ್ವಾಧೀನದಲ್ಲಿ ಯಾವುದೇ ಖಾಲಿ ನಿವೇಶನ ಇರುವುದಿಲ್ಲ.

ಆ) ಹಳೇ ಮಾರುಕಟ್ಟೆ ಪ್ರಾಂಗಣದ 98 ನಿವೇಶನಗಳಲ್ಲಿ 2 ನಿವೇಶನಗಳು ಖಾಲಿ ಇರುತ್ತದೆ. ಹಾಗೂ 96 ನಿವೇಶನಗಳಲ್ಲಿ ಕಟ್ಟಡ ನಿರ್ಮಿಸಿದ ಮತ್ತು ನಿರ್ಮಾಣ ಹಂತದಲ್ಲಿರುವ ನಿವೇಶನಗಳಾಗಿರುತ್ತವೆ. ವಿಸ್ತೃತ ಮಾರುಕಟ್ಟೆ ಪ್ರಾಂಗಣದ 89 ನಿವೇಶನಗಳಲ್ಲಿ 85 ನಿವೇಶನಗಳು ಖಾಲಿ ಇದ್ದು, 4 ನಿವೇಶನಗಳಲ್ಲಿ ಕಟ್ಟಡ ನಿರ್ಮಿಸಿ ನಿರ್ಮಾಣ ಹಂತದಲ್ಲಿರುತ್ತವೆ.

ಇ) ಮಾರುಕಟ್ಟೆ ಸಮಿತಿಯು 18 ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದು, ಇದರಲ್ಲಿ 10 ನಿವೇಶನಗಳ ಕುರಿತು ಕಟ್ಟಡ ನಿರ್ಮಿಸಿಕೊಳ್ಳಲು ಅವಧಿ ವಿಸ್ತರಣೆ ಮಾಡಲಾಗಿದೆ.

ಈ) 3 ಪ್ರಕರಣಗಳು ಸಿಂಧನೂರು ಮಾರುಕಟ್ಟೆ ಸಮಿತಿಯ ಗಮನಕ್ಕೆ ಬಂದಿರುತ್ತದೆ.

ಉ) ಹೌದು.

ಊ) 1997-98ನೇ ಸಾಲಿನ ಇಲಾಖೆಯ ಕ್ರಿಯಾ ಯೋಜನೆಯಲ್ಲಿ ಇದಕ್ಕಾಗಿ ರೂ. 5.00 ಲಕ್ಷ ಮಂಜೂರು ಮಾಡಲಾಗಿದ್ದು, ಪ್ರಾಂಗಣದಲ್ಲಿ ನೀರಿನ ವ್ಯವಸ್ಥೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಸಿಂಧನೂರು ತಾಲ್ಲೂಕಿನಲ್ಲಿ ಮಂಜೂರಾದ ಅಂಬೇಡ್ಕರ್ ಯೋಜನೆಯ ಮನೆಗಳು

1728 - ಶ್ರೀ ಕೆ. ವಿರೂಪಾಕ್ಷ (ಸಿಂಧನೂರು) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ತಾಲ್ಲೂಕಿನಲ್ಲಿ ತಾಲ್ಲೂಕ್ ಪಂಚಾಯತ್ ವತಿಯಿಂದ 1993-94, 94-95ರಲ್ಲಿ ಅಂಬೇಡ್ಕರ್ ಯೋಜನೆಯಲ್ಲಿ ಮಂಜೂರಿಯಾದ ಮನೆಗಳೆಷ್ಟು ? ಅದರಲ್ಲಿ ಎಷ್ಟು ಪೂರ್ತಿಯಾಗಿವೆ ? ಪೂರ್ತಿಯಾಗದೇ ಇರುವ ಮನೆಗಳೆಷ್ಟು ? ಪೂರ್ತಿಯಾಗದೇ ಇರಲಿಕ್ಕೆ ಕಾರಣಗಳೇನು ?

ಆ) ಪೂರ್ತಿಯಾಗದೇ ಇರುವ ಮನೆಗಳ ಸಂಪೂರ್ಣ ಹಣ ಪಡೆದಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೆ ? ಆ ಹಣ ಯಾರು ಪಡೆದಿದ್ದಾರೆ, ಅವರ ಮೇಲೆ ಸರಕಾರ ಯಾವ ಕ್ರಮ ಕೈಗೊಂಡಿದೆ ?

ಇ) ಪೂರ್ತಿಯಾಗಲಾರದ ಮನೆಗಳನ್ನು ಎಷ್ಟು ದಿವಸಗಳಲ್ಲಿ ಪೂರ್ತಿ ಮಾಡಲಾಗುವುದು ?